ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **786/2013** ಪಿ.ಡಬ್ಲ್ಯೂ **01**

| | | |
|---|---|---|
| ಸಾಕ್ಷಿಯ ಹೆಸರು | - ಪ್ರಕಾಶ | ದಿನಾಂಕ 25-07-2023 ರಂದು ಪ್ರಮಾಣ ವಚನ ಮಾಡಿಸಲಾಯಿತು. |
| ತಂದೆಯ ಹೆಸರು | - ಕಾಳಪ್ಪ | |
| ವಯಸ್ಸು | - 54 ವರ್ಷ | |
| ಉದ್ಯೋಗ | - ಎ.ಎಸ್.ಐ ತೋರಣಗಲ್ಲ ಪೋಲಿಸ ಠಾಣೆ | |
| ವಾಸ ಸ್ಥಳ | - ತೋರಣಗಲ್ಲ | |

**ಕಲಂ 299 ರಡಿಯಲ್ಲಿ ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ನಾನು ದಿಃ **03-12-2021** ರಿಂದ ಇಲ್ಲಿಯವರೆಗೆ ನಾನು ತೋರಣಗಲ್ಲ ಪೋಲಿಸ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತಿದ್ದೆನೆ.

ನಾನು ಸದರಿ ಪ್ರಕರಣದಲ್ಲಿ 3 ನೇ ಆರೋಪಿಯ ವಿರುದ್ದ ಹೊರಡಿಸಿದ ಉದ್ಘೋಷಣಾ ವಾರೆಂಟನ್ನು ಪಡೆದುಕೊಂಡು ಜಾರಿ ಮಾಡಲು 3 ನೇ ಆರೋಪಿಯ ವಿಳಾಸಕ್ಕೆ ಹೋಗಿದ್ದು 3 ನೇ ಆರೋಪಿಯ ಸದರಿ ವಿಳಾಸದಲ್ಲಿ ಇರಲಿಲ್ಲ ಹಾಗಾಗಿ ಉದ್ಘೋಷಾಣಾ ವಾರೆಂಟನ ಪ್ರತಿಯನ್ನು 3 ನೇ ಆರೋಪಿಯ ಈಗಾಗಲೇ ವಾಸ ಇದ್ದ ಮನೆಯ ಬಾಗಿಲಿಗೆ ವಾರೆಂಟನ್ನು ಅಂಟಿಸಿರುತ್ತೇನೆ. 3 ನೇ ಅರೋಪಿಯ ಖಾಯಂ ವಿಳಾಸ ಉಮರಾಪುರ ಗ್ರಾಮ, ಗುರುದಾಸ ಪುರ ಜಿಲ್ಲಾ, ಪಂಜಾಬ ರಾಜ್ಯವಾಗಿದ್ದು, ಉಮರಾಪುರ ಗ್ರಾಮದಲ್ಲಿ ಉದ್ಘೋಷಣಾ ಪ್ರತಿಯನ್ನು ಬಸ್ಸ ನಿಲ್ದಾಣದಲ್ಲಿ ಹಾಗೂ ಚೌಕಿ ಪೋಲಿಸ ಠಾಣೆಯಲ್ಲಿ ಉದ್ಘೋಷಣಾ ವಾರೆಂಟನ ಪ್ರತಿಯನ್ನು ಅಂಟಿಸಿರುತ್ತೆನೆ. ಹಾಗೂ ಪಂಚನಾಮೆಯನ್ನು ಸಹ ಜರುಗಿಸಿರುತ್ತೇನೆ. ನಂತರ ಗುರುದಾಸ ಪುರ ಜಿಲ್ಲಾಧಿಕಾರಿಗಳ ಕಚೇರಿ ತಮ್ಮ ಸಬ್ ರಿಜಿಸ್ಟರ ಕಚೇರಿ ಹಾಗೂ ತಹಶೀಲ್ದಾರ ಕಚೇರಿ ಬಟಾಲಾ ಗಳಿಗೆ ಬೇಟಿ ನೀಡಿ ಆರೋಪಿಯ ಬಗ್ಗೆ ಚರ ಮತ್ತು ಸ್ದಿರ ಆಸ್ತಿಯ ಮಾಹಿತಿ ಕೋರಿ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಬಟಾಲಾ ತಹಶೀಲ್ದಾರವರು ಯಾವುದೆ ಆಸ್ತಿ ಇರುವುದಿಲ್ಲ ಎಂದು ತಿಳಿಸಿ ವರದಿಯನ್ನು ನೀಡಿರುತ್ತಾರೆ. ಅದೇ ರೀತಿ ಜಿಲ್ಲಾಧಿಕಾರಿ ಕಚೇರಿಯವರು ಸಹ ವರದಿಯನ್ನು ನೀಡಿರುತ್ತಾರೆ. ಸ್ದಳಿಯ ಪುರಸಭೆ ಸದಸ್ಯರಾದ ನರಪೀಂದರ ಸಿಂಗ ರವರ ಆರೋಪಿಯ ಬಗ್ಗೆ ವಿಚಾರಣೆ ಮಾಡಿರುತ್ತೇವೆ. ಸದರಿ ಸ್ದಳಗಳಲ್ಲಿ ಬೇಟಿ ನೀಡಿದಾಗ ಪೋಟೊಗಳನ್ನು ಸಹ ತೆಗೆದಿರುತ್ತೇವೆ. ಆರೋಪಿಯ ಹೆಸರಿನಲ್ಲಿ ಯಾವುದೆ ಚರ ಮತ್ತು ಸ್ದಿರ

ಆಸ್ತಿಗಳು ದೊರಕಿರುವುದಿಲ್ಲ. ನಂತರ ಠಾಣೆಗೆ ಬಂದು ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಠಾಣಾಧಿಕಾರಿಗಳ ಮೂಲಕ ವರದಿಯನ್ನು ಸಲ್ಲಿಸಿರುತ್ತೇನೆ.

ಸದರಿ ವರದಿಯನ್ನು ನಿಪಿ 1 ಎಂದು, ಉದ್ಘೋಷಣಾ ವಾರೆಂಟನ ಪ್ರತಿಯನ್ನು ನಿಪಿ 2 ಎಂದು, ಆರೋಪಿಯ ಗ್ರಾಮದಲ್ಲಿ ಜರುಗಿಸಿದ ಪಂಚನಾಮೆಯನ್ನು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು, ಸಬ್ ರಿಜಿಸ್ಟರ ಅವರಿಗೆ ಸಲ್ಲಿಸಿದ ಮನವಿಯನ್ನು ನಿಪಿ 4 ಎಂದು, ಸಬ್ ರಿಜಿಸ್ಟರ ಅವರು ನೀಡಿದ ವರದಿಯನ್ನು ನಿಪಿ 5 ಎಂದು, ತಹಶೀಲ್ದಾರವರಿಗೆ ನೀಡಿದ ಮನವಿಯನ್ನು ನಿಪಿ 5 ಎಂದು, ತಹಶೀಲ್ದಾರವರು ನೀಡಿದ ವರದಿಯನ್ನು ನಿಪಿ 7 ಎಂದು, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯನ್ನು ನಿಪಿ 8 ಎಂದು ಮತ್ತು ಅವರು ನೀಡಿದ ವರದಿಯನ್ನು ನಿಪಿ 9 ಎಂದು, ನರಪೀಂದರ ಸಿಂಗ ರವರು ನೀಡಿದ ಹೇಳಿಕೆಯನ್ನು ನಿಪಿ 10 ಎಂದು, ಉದ್ಘೋಷಣಾ ವಾರೆಂಟನ್ನು ಅಂಟಿಸಿದ ಸ್ಥಳದಲ್ಲಿ ತೆಗೆದ ಒಟ್ಟು 5 ಪೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 11 ರಿಂದ 15 ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**